**ಸಾಕ್ಷಿಗೆ ದಿನಾಂಕಃ21-09-2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**::ಮುಂದುವರೆದ ಪಾಟೀಸವಾಲು:: ಪ್ರತಿವಾದಿ ಪರ ಶ್ರೀ. ಎಸ್. ಜಿ. ಎಸ್ ವಕೀಲರಿಂದ::**

1. ನನ್ನ ಮತ್ತು ಪ್ರತಿವಾದಿಯ ನಡುವೆ ಇದೇ ನ್ಯಾಯಾಲಯದಲ್ಲಿ ಹಿಂದೆ 2 ದಾವೆಗಳು ನಡೆದಿರುತ್ತವೆ ಎಂದರೆ ಸರಿ. ಸದರಿ 2 ದಾವೆಯಲ್ಲಿ ಒಂದು ದಾವೆಯನ್ನು ನಾನು ಪ್ರತಿವಾದಿಯ ವಿರುದ್ಧ ಹಾಗೂ ಮತ್ತೊಂದು ದಾವೆಯನ್ನು ಪ್ರತಿವಾದಿ ನನ್ನ ವಿರುದ್ಧ ಹೂಡಿದ್ದರು ಎಂದರೆ ಸರಿ. ನಾನು ಸಲ್ಲಿಸಿದ್ದ ಹಿಂದಿನ ದಾವೆಯು ದಾವಾ ಸ್ವತ್ತು ಮತ್ತು ಈ ದಾವೆಯ ದಾವಾ ಸ್ವತ್ತು ಒಂದೇ ಆಗಿರುತ್ತದೆ ಎಂದರೆ ಸರಿ. ನಾನು ಹಿಂದೆ ಸಲ್ಲಿಸಿದ್ದ ದಾವೆಯು ವಜಾ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿ ನನ್ನ ವಿರುದ್ಧ ಹೂಡಿದ್ದ ದಾವೆಯು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಮನೆ ಮತ್ತು ಜಮೀನು ಕಾವಡಿ ಗ್ರಾಮದ ಸರ್ವೆ ನಂ.213 ನಲ್ಲಿ ಬರುತ್ತದೆ ಎಂದರೆ ಸರಿ. ಪ್ರತಿವಾದಿಗೆ ಅದನ್ನು ಹೊರತು ಪಡಿಸಿ ಅದೇ ಗ್ರಾಮದ ಸ ನಂ. 220 ರಲ್ಲಿ 1 ಎಕರೆ ಭಾಗಾಯ್ತು ಜಮೀನು ಸಹ ಇರುತ್ತದೆ ಎಂದರೆ ಸರಿ. ಸದರಿ ಸ ನಂ.220 ಜಮೀನಿನಿಂದ ಸ ನಂ. 213 ರಲ್ಲಿರುವ ಪ್ರತಿವಾದಿಯ ಮನೆಗೆ ಹೋಗಲು ಒಂದು ಸರ್ಕಾರಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ತನ್ನ ತೋಟದಲ್ಲಿರುವ ದಾರಿಯನ್ನು ಉಪಯೋಗಿಸಿ ತನ್ನ ಮನೆಗೆ ಹೋಗುತ್ತಾರೆ ಎಂದು ನುಡಿದಿರುತ್ತಾರೆ. ನಾನು ಈಗ ಹೇಳುತ್ತಿರುವ ದಾರಿಗೆ ಸಂಬಂಧ ಪಟ್ಟಂತೆ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಕಾರಣ ಅದರ ಅವಶ್ಯಕತೆ ಈ ದಾವೆಯಲ್ಲಿ ನನಗೆ ಇರುವುದಿಲ್ಲ. ಪ್ರತಿವಾದಿಗೆ ಅವರ ಪ್ರತಿವಾದ ಪತ್ರದಲ್ಲಿ ತೋರಿಸಿರುವ ದಾರಿಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಪ್ರತಿವಾದಿಯ ತೋಟದಲ್ಲಿಯೇ ಒಂದು ದಾರಿ ಇದೆ ಎಂದು ನಾನು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮತ್ತು ಪ್ರತಿವಾದಿಯ ನಡುವೆ ಹಿಂದೆ ನಡೆದಿರುವ ವ್ಯಾಜ್ಯಗಳ ಬಗ್ಗೆ ನಾನು ನನ್ನ ದಾವಾ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಒಂದೇ ಉದ್ದೇಶದಿಂದ ನಿಜ ಸಂಗತಿಗಳನ್ನು-

ಮರೆಮಾಚಿ ಸುಳ್ಳು ದಾವಾ ಕಾರಣ ಸೃಷ್ಟಿಸಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ಅದಕ್ಕೆ ಪೂರಕವಾಗಿ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೆ ಯಾವುದೇ ದಾವಾ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**::ಮರುವಿಚಾರಣೆ ಇಲ್ಲ::**

**(ದಿನಾಂಕ:21-09-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಸಹಿ/-
**ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ**
**ಶೃಂಗೇರಿ.**